ವಿಜಯ ಕರ್ನಾಟಕ VK
ಶನಿವಾರ, 27 ಅಕ್ಟೋಬರ್ 2018, ಶಿವಮೊಗ್ಗ

# ಗೊಂದಿ ಅಣೆಕಟ್ಟೆ ರಕ್ಷಣೆ ನಮ್ಮ ಹೊಣೆ

**ಶಿವಮೊಗ್ಗ:** ಗೊಂದಿ ಅಣೆಕಟ್ಟೆಯು ಪೂರ್ವಜರು ನಮಗೆ ಬಿಟ್ಟು ಹೋಗಿರುವ ಅತ್ಯಮೂಲ್ಯ ಆಸ್ತಿ, ಅದನ್ನು ಜೋಪಾನವಾಗಿ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ನೀರಾವರಿ ನಿಗಮದ ಮುಖ್ಯ ಎಂಜಿನಿಯರ್ ಆರ್.ಪಿ.ಕುಲಕರ್ಣಿ ಹೇಳಿದರು.

ನೀರಾವರಿ ನಿಗಮ, ಭದ್ರಾ ಕಾಡಾ ಹಾಗೂ ಯೋಜನಾ ಸಮಾಲೋಚಕ ಸಂಸ್ಥೆಯಾದ ಎಸ್.ಎಂ.ಇ.ಸಿ ವತಿಯಿಂದ ಕಾಡಾ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ಗೊಂದಿ ನೀರು ಬಳಕೆದಾರರ ಸಹಕಾರ ಸಂಘಗಳ ಒಂದು ದಿನದ ಕಾರ್ಯಾಗಾರದಲ್ಲಿ ಮಾತನಾಡಿದರು. ವಿಶ್ವ ಅಭಿವೃದ್ಧಿ ಬ್ಯಾಂಕಿನ 130 ಕೋಟಿ ರೂ. ಅನುದಾನದಲ್ಲಿ ಗೊಂದಿ ನಾಲೆಯ ಪುನರುಜ್ಜೀವನ ಕೈಗೊಂಡಿದ್ದು ಇದನ್ನು ಮಾದರಿ ಯೋಜನೆಯನ್ನಾಗಿ ರೂಪಿಸುವ ಜವಾಬ್ದಾರಿ ನೀರು ಬಳಕೆದಾರರ ಸಂಘಗಳ ಮೇಲಿದೆ. ಸಂಘದ ಸದಸ್ಯರ ಪರಿಣಾಮಕಾರಿ ಭಾಗವಹಿಸುವಿಕೆಯ ಮೇಲೆ ಯೋಜನೆಯ ಯಶಸ್ಸು ನಿಂತಿದೆ ಎಂದರು. ಯೋಜನೆ ಸಮಾಲೋಚಕ ಸಹಾಯ ಸಂಸ್ಥೆಯ ತಂಡದ ಉಪನಾಯಕ ಶ್ರೀನಿವಾಸ ಮುದ್ದರ್ಕರ್, ಸಂಘಗಳ ಮನೋಭಾವ ಬದಲಾವಣೆ, ಒಗ್ಗಟ್ಟು, ಪ್ರಾಮಾಣಿಕತೆ ಹಾಗೂ ಕ್ರಿಯಾಶೀಲತೆಯ ಬಗ್ಗೆ ವಿವರಿಸಿದರು. ಹೊಸಳ್ಳಿ ನೀರು ಬಳಕೆದಾರರ ಸಹಕಾರ ಸಂಘದ ವೀರೇಶ್, ತಮ್ಮ ಸಂಘವು ಕಳೆದ 10 ವರ್ಷದಲ್ಲಿ ನೀರಿನ ಶುಲ್ಕ ಸಂಗ್ರಹ, ಕಾಮಗಾರಿ ಅನುಷ್ಠಾನ, ಶ್ರಮದಾನ, ಲೆಕ್ಕಪತ್ರ ನಿರ್ವಹಣೆ ಹಾಗೂ ಇತರ ಸಾಮಾಜಿಕ ಕಾರ್ಯ ನಿರ್ವಹಿಸುತ್ತಿರುವುದನ್ನು ವಿವರಿಸಿದರು. ಹೊಳೆಬೈರೇನಹಳ್ಳಿಯ ಪ್ರಗತಿಪರ ರೈತ ಕುಮಾರ್ ನಾಯ್ಡು, ಕಡಿಮೆ ನೀರಿನಲ್ಲಿ ಕೃಷಿ, ಉಪ ಕಸುಬುಗಳ ಜೋಡಣೆ, ದೇಸೀ ರಾಸು ಹಾಗೂ ಭತ್ತದ ತಳಿಗಳ ಸಂರಕ್ಷಣೆಯ ತಮ್ಮ ಅನುಭವ ಹಂಚಿಕೊಂಡರು. ಸಹಾಯಕ ಎಂಜಿನಿಯರ್ ಉಮೇಶ್, ಗೊಂದಿ ನಾಲೆ ಪುನರುಜ್ಜೀವನದ ಯೋಜನಾ ಪ್ರದೇಶ, ಕಾಲುವೆಗಳ ವಿವರ, ಸಮಸ್ಯೆಗಳು ಹಾಗೂ ಪ್ರಸ್ತುತ ಕೈಗೊಂಡಿರುವ ಪುನಶ್ಚೇತನ ಕಾಮಗಾರಿಯ ಮಾಹಿತಿ ನೀಡಿದರು.

ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆ ಇರುವುದರಿಂದ ರೈತರು ಭತ್ತ ಹೊರತುಪಡಿಸಿ ಪರ್ಯಾಯ ಬೆಳೆಗಳಾದ ಹೂವು, ತೆಂಗು, ಹುರುಳಿ, ಮೆಕ್ಕೆಜೋಳ ಇತ್ಯಾದಿಗಳನ್ನು ಅಳವಡಿಸಿಕೊಳ್ಳಬೇಕು. ಭತ್ತವನ್ನು ಶ್ರೀ ಪದ್ಧತಿಯಲ್ಲಿ ಬೆಳೆದರೆ ನೀರು, ಬೀಜ ಹಾಗೂ ಖರ್ಚಿನಲ್ಲಿ ಉಳಿತಾಯವಾಗಲಿದೆ.

**–ಅಂಟಾಡಿ ಮಾಧವ್**, ಭದ್ರಾ ಕಾಡಾದ ಆಡಳಿತಾಧಿಕಾರಿ

Published for the proprietors, Metropolitan Media Company Limited, by R. J. Prakas
Regd. Office: No.40, Jaya Sai Towers, Sajjan Rao Road, V V Puram, Bengaluru – 56